ಉ) ಹುಕ್ಕೇರಿ ತಾಲ್ಲೂಕಿನ ಕೆರೆಗಳ ನಿರ್ಮಾಣವನ್ನು ಆಧ್ಯತೆ ಮೇರೆಗೆ ಪೂರ್ತಿ ಮಾಡಲು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೪ ಕೆರೆಗಳು ಅವುಗಳಿಂದರೆ:

೧. ಅಮ್ಮಣಗಿ ಇಂಗು ಕೆರೆ
೨. ಭೈರಾಪುರ (ಜಾಗತಿಕ ಬ್ಯಾಂಕ್ ನೆರವಿನಿಂದ)
೩. ಹರಗಾಪುರ ಸಣ್ಣ ನೀರಾವರಿ ಕೆರೆ
೪. ಬೆಳವಿ ಸಣ್ಣ ನೀರಾವರಿ ಕೆರೆ

ಆ) ತಲಾ ಒಂದು ಸಾವಿರ ರೂಪಾಯಿ ನಾಂಕೇತಿಕ ಅನುದಾನದೊಡನೆ ೧೯೮೪-೮೫ರ ಆಯ-ವ್ಯಯದಲ್ಲಿ ಸೇರಿದ್ದ ೩ ಕೆರೆಗಳು ಹೀಗಿವೆ:

೧. ಮೊಸರಗುಪ್ಪ ಸಣ್ಣ ನೀರಾವರಿ ಕೆರೆ
೨. ಅಂಕಲಿ ಸಣ್ಣ ನೀರಾವರಿ ಕೆರೆ
೩. ಬಾದವಾಡಿ ಸಣ್ಣ ನೀರಾವರಿ ಕೆರೆ

ಇ) ಭೂ ಸ್ವಾಧೀನಕ್ಕೆ ಆಗತ್ಯವಾದ ಕ್ರಮಗಳನ್ನು ಕೈಗೊಂಡಿದ್ದು ಕರ್ನಾಟಕ ಭೂ ಸ್ವಾಧೀನ ಕಾಯ್ದೆಯ ಸೆಕ್ಷನ್ ೪ (೧)ರ ಪ್ರಕಾರ ಕಂದಾಯ ಇಲಾಖೆಯವರು ದಿನಾಂಕ: ೨೫-೫-೮೫ ಮತ್ತು ೨೧-೫-೮೫ರಂದು ಹರಗಾಪುರ ಕೆರೆ ಹಾಗೂ ಬೆಳವಿ ಕೆರೆಗೆ ಕ್ರಮವಾಗಿ ಆಗತ್ಯ ಪ್ರಕಟಣೆಗಳನ್ನು ಹೊರಡಿಸಿದ್ದು ಕರ್ನಾಟಕ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಈ) ೭೫ ಲಕ್ಷ ರೂ. ಅಂದಾಜು ವೆಚ್ಚದ ಭೈರಾಪುರಕೆರೆ ಕೆಲಸವು ಪ್ರಗತಿಯಲ್ಲಿದ್ದು ಈಗಾಗಲೇ ೧೧.೪೯ ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ. ೧೯೮೫-೮೬ರ ಸಾಲಿನಲ್ಲಿ ಈ ಕೆರೆಗೆ ೧೫.೦೦ ಲಕ್ಷ ರೂ. ಗಳ ಅನುದಾನ ಒದಗಿಸಲಾಗಿದ್ದು, ಈ ಕೆಲಸವನ್ನು ೧೯೮೬-೮೭ರ ಸಾಲಿನಲ್ಲಿ ಪೂರ್ತಿಗೊಳಿಸಲು ಉದ್ದೇಶಿಸಲಾಗಿದೆ.

ಉ) ಹಣಕಾಸಿನ ಲಭ್ಯತೆಯನ್ನವಲಂಬಿಸಿ, ಕೆಲಸಗಳನ್ನು ಪೂರ್ತಿಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಅಫಜಲ್‌ಪುರ ತಾಲ್ಲೂಕಿನಲ್ಲಿ ಲಿಫ್ಟ್ ಇರಿಗೇಷನ್ ಯೋಜನೆಯ ಕುರಿತು

೧೦೧ (೫೪೦) ಶ್ರೀ ಮಾಲಿಕಯ್ಯ ಗುತ್ತೇದಾರ್ (ಅಫಜಲ್‌ಪುರ).—ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಅಫಜಲ್‌ಪುರ ತಾಲ್ಲೂಕಿಗೆ ಸರ್ಕಾರದವರು ಮಂಜೂರು ಮಾಡಿ ಸ್ಥಾಪಿಸಿದ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ?

ಆ) ಪೂರ್ಣವಾಗಿ ಕಾರ್ಯ ಆರಂಭ ಮಾಡಿದ ಏತ ನೀರಾವರಿಗಳ ಸಂಖ್ಯೆ ಎಷ್ಟು ?

ಇ) ಕೆಲವು ಏತ ನೀರಾವರಿ ಯೋಜನೆಗಳ ಕೆಲಸ ಕಳೆದ ೧೦ ವರ್ಷಗಳಿಂದ ಅರ್ಧದಲ್ಲೇ ಉಳಿದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? (ಅವುಗಳ ಅಂಕಿಸಂಖ್ಯೆ ನೀಡುವುದು)

ಈ) ಹಾಗಿದ್ದಲ್ಲಿ ಸದರಿ ಕೆಲಸಗಳನ್ನು ಪೂರ್ಣಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹತ್ತು ಏತ ನೀರಾವರಿ ಯೋಜನೆಗಳು ಮಂಜೂರಾಗಿವೆ. ಅವುಗಳ ಪೈಕಿ ಏಳು ಯೋಜನೆಗಳು ಕಾರ್ಯ ಆರಂಭ ಮಾಡಿವೆ.

ಆ) ಏಳು.

ಇ) ಮೂರು ಯೋಜನೆಗಳು ಇನ್ನೂ ಪೂರ್ಣಗೊಳ್ಳಬೇಕು.

ಈ) ಇವುಗಳನ್ನು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದ ಬೃಹತ್ ನೀರಾವರಿ ಯೋಜನೆಗಳ ಪ್ರಗತಿ ಕುರಿತು

೧೦೨ (೭೭) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಲೋಕೋಪಯೋಗಿ ಜಲಾಸಂಪನ್ಮೂಲ ಹಾಗೂ ನೀರಾವರಿ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ರಾಜ್ಯದಲ್ಲಿರುವ ಬೃಹತ್ ನೀರಾವರಿ ಯೋಜನೆಗಳಿಷ್ಟು ? ಹಾಗೂ ಅವುಗಳು ಎಲ್ಲೆಲ್ಲಿ ಇವೆ ?

(ಆ) ಪ್ರತಿಯೊಂದು ಯೋಜನೆಗೆ ಇಲ್ಲಿಯವರೆಗೆ ನಿಡಿದ ವಾರ್ಷಿಕ ಅನುದಾನ ಎಷ್ಟು ? (೧೯೮೩-೮೪), ೮೪-೮೫ ಮತ್ತು ೮೫-೮೬ನೇ ಸಾಲಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುವುದು)

(ಇ) ಬೃಹತ್ ನೀರಾವರಿ ಯೋಜನೆಗಳು ಈಗ ಯಾವ ಹಂತದಲ್ಲಿವೆ ?

(ಈ) ಮಲಪ್ರಭಾ ಬಲದಂಡೆ ಯೋಜನೆಗೆ ಹೆಚ್ಚು ಹಣ ತೊಡಗಿಸಿರುವುದಕ್ಕೆ ಕಾರಣಗಳೇನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಹಾಗೂ ನೀರಾವರಿ ಮಂತ್ರಿಗಳು).—

(ಅ) ವಿವರಗಳನ್ನು ಲಗತ್ತಿಸಿರುವ ಪಟ್ಟಿಯ ಕಾಲಂ ೧ ರಿಂದ ೫ ರಲ್ಲಿ ನಮೂದಿಸಲಾಗಿದೆ.

(ಆ) ಲಗತ್ತಿಸಿರುವ ಪಟ್ಟಿಯ ಕಾಲಂ ೬ ರಿಂದ ೮ ರಲ್ಲಿ ನಮೂದಿಸಲಾಗಿದೆ.

(ಇ) ಲಗತ್ತಿಸಿರುವ ಪಟ್ಟಿಯ ಕಾಲಂ ೯ ರಲ್ಲಿ ನಮೂದಿಸಲಾಗಿದೆ.

(ಈ) ಮಲಪ್ರಭಾ ಬಲದಂಡೆ ನಾಲೆಗೆ ಹೆಚ್ಚು ಹಣ ತೊಡಗಿಸಿರುವುದಿಲ್ಲ.